ಅಸ್ತಮಾ, ಸಕ್ಕರೆ ಮತ್ತು ಬೀಪಿ ಸದಾ ಪೀಡಿಸುತ್ತಿದ್ದ ಕಾಯಿಲೆಗಳಾದರೆ, ವಯಸ್ಸು ನಲುವತ್ತು ದಾಟುತ್ತಿದ್ದಂತೆ ಶುರುವಾದದ್ದು ಬೆನ್ನು ನೋವು. ಸ್ವಂತ ಮನೆಯಲ್ಲಿ ಸುಖದಿಂದ ಜೀವಿಸಬೇಕು ಎಂಬ ಹಂಬಲದಲ್ಲಿದ್ದ ಜಯಂತಿ, ಹೊಸ ಫ್ಲ್ಯಾಟಿಗೆ ಬಂದು ತನ್ನಾಸೆಯಂತೆ ಕೆಲಕಾಲ ಬಾಳಿದ್ದರು. ಮಲ್ಲಿಕಾ ಕಾಲೇಜು ಕಲಿಯುತ್ತಿದ್ದಾಗ ನೆರೆಹೊರೆಯವರ ಟೀಕೆ–ಟಿಪ್ಪಣಿಗಳ ಹೊರತಾಗಿಯೂ ಮಗಳಿಗೆ ಅವಳ ಇಷ್ಟದಂತೆ ಇರುವ ಸ್ವಾತಂತ್ರ್ಯ ಕೊಟ್ಟಿದ್ದರು. ಮಲ್ಲಿಕಾಳ ಮದುವೆಯ ಸಂಭ್ರಮಕ್ಕೆ ಈ ಮನೆಯೇ ಸಾಕ್ಷಿಯಾಗಿತ್ತು. ಮಲ್ಲಿಕಾಳಿಗೆ ಗಂಡನ ಮನೆಯಲ್ಲಿ ಸ್ವಾತಂತ್ರ್ಯಕ್ಕೆ ಕಡಿವಾಣ ಬಿದ್ದಿತ್ತು. ಇದಕ್ಕೆ ಗಂಡ ಹೆಂಡತಿ ತುಂಬ ನೊಂದುಕೊಂಡಿದ್ದರು. ಮೊದಲೇ ಇದ್ದ ಆರೋಗ್ಯದ ಸಮಸ್ಯೆಗಳಿಗೆ ಮಗಳ ಆತಂಕವೂ ಸೇರಿ ಹಾಸಿಗೆ ಹಿಡಿದ ಜಯಂತಿ ಮತ್ತೆ ಬಹಳ ಕಾಲ ಬದುಕಲಿಲ್ಲ. ಮಡದಿ ಮೃತಪಟ್ಟ ಬಳಿಕ ಮೂರು ಬೆಡ್‌ರೂಮಿನ ಆ ಮನೆಯಲ್ಲಿ ಜೀಕೆ ಏಕಾಂಗಿಯಾಗಿದ್ದರು. ರಿಟಾಯರ್ ಆದ ಮೇಲಂತೂ ಜೀಕೆ ಒಂಟಿ ಬದುಕನ್ನು ವಿಧಿಯಿಲ್ಲದೆ ಒಪ್ಪಿಕೊಂಡಿದ್ದರು.

ಜೀಕೆ ನೂರಾ ಒಂದರಲ್ಲಿ ವಾಸಿಸುತ್ತಿದ್ದರೆ ನೂರಾ ಎಂಟರಲ್ಲಿ ಮಿಲಿಟರಿ ಅಂಕಲ್ ತಮ್ಮ ಕುಟುಂಬದೊಂದಿಗೆ ವಾಸವಾಗಿದ್ದರು. ಭರ್ಜರಿ ದೇಹ, ದಪ್ಪ ಮೀಸೆ ಮತ್ತು ಮನೆಯಲ್ಲಿ ತೂಗುಹಾಕಿದ್ದ ಸೇನೆಯ ಯೂನಿಫಾರ್ಮ್ ಅವರಿಗೆ ಬಿಲ್ಡಿಂಗಿನಲ್ಲಿ ವಿಶೇಷ ಸ್ಥಾನಮಾನ ಕಲ್ಪಿಸಿಕೊಟ್ಟಿದ್ದವು. ಒಂದೇ ಮಹಡಿಯಲ್ಲಿ ಇದ್ದವರಾದ್ದರಿಂದ ಜೀಕೆ ಮತ್ತು ಮಿಲಿಟರಿ ಅಂಕಲ್ ವಾರಕ್ಕೊಂದೆರಡು ಬಾರಿ ಒಟ್ಟಿಗೆ ಕೂತು ಎರಡು ಪೆಗ್ ಮದ್ಯದೊಂದಿಗೆ ನೆನಪಾಗದವರನ್ನು ನೆನಪಿಸಿಕೊಂಡು, ಮರೆತುಹೋಗದವರನ್ನು ಮರೆತು ಸಂಭ್ರಮಿಸುವುದು ಇಬ್ಬರಿಗೂ ಪ್ರಿಯ ಹವ್ಯಾಸವಾಗಿತ್ತು. ಹಾಗೆ ಒಂದು ದಿನ ಗುಟುಕೇರಿಸಿ ಮಲಗಿದ್ದ ಜೀಕೆಗೆ ಬೆಳಗ್ಗೆ ವೇಳೆ ಬಂದ ವಾಟ್ಸ್‌ಆ್ಯಪ್ ಮೆಸೇಜು ಶಬ್ದಕ್ಕೆ ಎಚ್ಚರವಾಯಿತು. ಮೆಸೇಜು ನೋಡಿದಾಗ ಜೀಕೆಯ ಮೈ ಜುಂ ಅಂದಿತು. "ನಾನು ಮಲ್ಲಿಕಾ. ಜಗಳ ಜೋರಾಗಿದೆ. ಕಾರ್ತಿ ನಿನ್ನೆ ಸಿಕ್ಕಾಪಟ್ಟೆ ಹೊಡೆದಿದ್ದಾನೆ. ಇವತ್ತು ಕೋಣೆಯಲ್ಲಿ ಕೂಡಿಹಾಕಿ ಹೋಗಿದ್ದಾನೆ. ನನ್ನ ಮೊಬೈಲ್ ಕಸಿದುಕೊಂಡಿದ್ದಾನೆ. ಇದು ನಮ್ಮ ಪಕ್ಕದ ಫ್ಲ್ಯಾಟಿನ ಕೆಲಸದವಳ ಮೊಬೈಲು. ಇಲ್ಲಿಗೆ ಬಂದು ನನ್ನನ್ನು ನರಕದಿಂದ ಪಾರು ಮಾಡಿ. ಬೇಗ ಬರದಿದ್ದರೆ ಮತ್ತೆ ನೀವು ನನ್ನಮುಖ ನೋಡಲ್ಲ."

ಜೀಕೆಗೆ ಪ್ರಜ್ಞೆ ಜಾಗೃತವಾಯಿತು. ಮಲ್ಲಿಕಾಳಿಗೆ ಮೊದಲಿನಿಂದಲೂ ಗಂಡನ ಮನೆಯ ಕಟ್ಟುಪಾಡುಗಳು ಸಹಿಸಲು ಅಸಾಧ್ಯ ಎನಿಸಿದ್ದವು. ಆಗಾಗ ಜಗಳ ಸಾಮಾನ್ಯವಾಗಿತ್ತು. ಕ್ರಮೇಣ ಸರಿಯಾಗುತ್ತದೆ ಎಂಬ ವಿಶ್ವಾಸ ಜೀಕೆ ದಂಪತಿಗಿತ್ತು. ಕೊನೆಗೂ ಅವರ ಆಶಯ ಸುಳ್ಳಾಗಿತ್ತು. ಜೀಕೆಯವರ ಮಡದಿಯ ಮರಣಾನಂತರ ಜಗಳ ತಾರಕಕ್ಕೇರಿತ್ತು. ಮಗಳು ಮತ್ತೆ ನೀವು ನನ್ನ ಮುಖ ನೋಡಲ್ಲ ಎಂದು ಬರೆಯುವಷ್ಟರ ಮಟ್ಟಿಗೆ ಸಮಸ್ಯೆ ತೀವ್ರವಾಗಿತ್ತು. ತಡಮಾಡದೆ ಮಿಲಿಟರಿ ಅಂಕಲ್ ಜೊತೆಗೆ ಜೀಕೆ ಬಾಡಿಗೆ ಕಾರಲ್ಲಿ ಅಳಿಯನ ಮನೆಗೆ ಹೊರಟರು.

ದಾರಿಯುದ್ದಕ್ಕೂ ತನ್ನ ಕುಟುಂಬ ಸಾಗಿ ಬಂದ ಸಮಸ್ಯೆಗಳು ಒಂದರ ಹಿಂದೆ ಒಂದು ಮುಚ್ಚಿದ ಕಣ್ಣಿನ ಹಿಂದೆ ಹಾದು ಹೋದವು. ಜೀಕೆ ಕಣ್ಣೊರಸಿಕೊಂಡರು. ಮಲ್ಲಿಕಾ ಮೊದಲು ಅಭಿಜಾತನೆಂಬವನೊಂದಿಗೆ ಗೆಳೆತನ ಬೆಳೆಸಿದ್ದಳು. ಇದ್ದ ಒಬ್ಬಳೇ ಮಗಳ ಸಂತೋಷವೇ ಮುಖ್ಯವೆಂದು ನಿರ್ಧರಿಸಿ, ಸರಿ ಮೀಟ್ ಮಾಡಿಸು ಅಂದಿದ್ದರು ಜೀಕೆ. ಅದೇನು ನಡೆಯಿತೋ... ಆತ ಬರಲಿಲ್ಲ. ನಿರಾಶೆಗೊಂಡ ಮಲ್ಲಿಕಾಳ ನಡೆನುಡಿ ತೀವ್ರವಾಗಿ ಬದಲಾಗಿ ಡಿಪ್ರೆಶನ್ನಿನ ಲಕ್ಷಣಗಳು ಗೋಚರಿಸಿದಾಗ ಹೆದರಿ ಹೋಗಿದ್ದ ಜೀಕೆ ಮಗಳ ಕಡೆಗೆ ಅಮ್ಮನಿಗಿಂತಲೂ ಜಾಸ್ತಿ ಧ್ಯಾನ ಕೊಟ್ಟು ನಾಜೂಕಾಗಿ ಆಕೆಯ ಭಗ್ನಪ್ರಣಯವನ್ನು ನಿಭಾಯಿಸಿದ್ದರು. "ಅಭಿಜಾತ ಮದುವೆಯಾಗಲು ಒಪ್ಪುತ್ತಿಲ್ಲ ಅಷ್ಟೇ ತಾನೆ. ಅವನನ್ನು ಮರೆತು ಬಿಡು. ಫೊರ್ಗೆಟ್ ಹಿಮ್ ಆಂಡ್ ಗೆಟ್ ಅಲಾಂಗ್" ಅನ್ನುತ್ತ ಹುರಿದುಂಬಿಸಿದ್ದರು. ಮಗಳು